## 1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು, ಮಡಿಕೇರಿ

## ಸ್ಪೆಷಲ್ ಕೇಸ್: 54/2019

ಪ್ರಾಸಾ- 22
ಚಾಸಾ- 29

| | | |
|---|---|---|
| ಸಾಕ್ಷಿದಾರರ ಹೆಸರು: | | ಮುರುಳಿಧರ್ |
| ತಂದೆಯ ಹೆಸರು | : | ಕೃಷ್ಣಪ್ಪ |
| ವಯಸ್ಸು | : | 56 ವರ್ಷ |
| ವೃತ್ತಿ | : | ಡಿ.ವೈ.ಎಸ್. ಪಿ ಹಾಸನ |
| ವಾಸ | : | ಹಾಸನ |

**ಸಾಕ್ಷಿಯನ್ನು ದಿನಾಂಕ 09-12-2024 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ**:

1. ನಾನು ದಿನಾಂಕ 2017 ನವೆಂಬರ್ ನಿಂದ 2020 ಜನವರಿ ರವರೆಗೂ ಸೋಮವಾರಪೇಟೆ ಉಪವಿಭಾಗದಲ್ಲಿ ಡಿ.ವೈ.ಎಸ್.ಪಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

**2.** ದಿನಾಂಕ 21-10-2019 ರಂದು ಮಾನ್ಯ ಎಸ್. ಪಿ ಅವರ ಆದೇಶದಂತೆ ಈ ಪ್ರಕರಣದ ಕಡತವನ್ನು ಪ್ರಾಸಾ-17 ರವರಿಂದ ವಹಿಸಿಕೊಂಡು ತನಿಖೆಯನ್ನು ಮುಂದುವರೆಸಿರುತ್ತೇನೆ. ಈಗ ನಾನು ನೋಡುತ್ತಿರುವ ಆದೇಶ ನಾನು ಎಸ್.ಪಿ ಅವರಿಂದ ಸ್ವೀಕರಿದ್ದ ಆದೇಶವಾಗಿದ್ದು , ಅದನ್ನು **ನಿಪಿ**-29 ಎಂದು ಅದರಲ್ಲಿ ಇರುವ ಸಾಕ್ಷಿ ಸಹಿಯನ್ನು **ನಿಪಿ**-29(ಎ) ಎಂದು ಗುರುತಿಸಲಾಯಿತು. ಆ ಬಳಿಕ

ಸೋಮವಾರಪೇಟೆಯ ಪೊಲೀಸ್ ಠಾಣೆಯ ಸರಹದ್ದಿನ ಕಕ್ಕೆ ಹೊಳೆ ಗೆ ಹೋಗಿ ಅಭಿಮನ್ಯು ಕುಮಾರ್ ಅವರ ವಾಸದ ಮನೆಯ ಹತ್ತಿರ ಇರುವ ವಿದ್ಯುತ್ ಕಂಬದ ಬಳಿ ಪ್ರಾಸಾ-2 ಸ್ಥಳವನ್ನು ತೋರಿಸಿಕೊಟ್ಟಂತೆ ಪಂಚರಾದ ಪ್ರಾಸಾ-6 ಹಾಗೂ ಚಾಸಾ-11 ರವರ ಸಮಕ್ಷಮ ನಿಪಿ-2 ರಂತೆ ಸ್ಥಳ ಮಹಜರ್ ತಯಾರಿಸಿರುತ್ತೇನೆ. ಅರದಲ್ಲಿದ ಸಾಕ್ಷಿ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಸದರಿ ಸ್ಥಳದಲ್ಲಿ ಆರೋಪಿ ಪ್ರಾಸಾ-1 ರವರಿಗೆ ಏನೋ ಒಡ್ಡ ಸೂಳೆಮಗನೇ ಎಂದು ಬೈದ ಜಾಗವನ್ನು ಪ್ರಾಸಾ-2 ತೋರಿಸಿರುತ್ತಾರೆ. ನಿಪಿ-2 ರ ಸಂದರ್ಭದಲ್ಲಿ ಫೋಟೊಗಳನ್ನು ತೆಗೆದಿರುತ್ತೇನೆ ಮತ್ತು ಕಚ್ಚಾ ನಕಾಶೆಗಳನ್ನು ತಯಾರಿಸಿರುತ್ತೇನೆ. ಸದರಿ ನಕಾಶೆಯನ್ನು ನಿಪಿ-30 ಎಂದು ಸಾಕ್ಷಿ ಸಹಿಯನ್ನು ನಿಪಿ-30(ಎ) ಎಂದು ಗುರುತಿಸಲಾಯಿತು

3. ಆ ಬಳಿಕ ಪ್ರಾಸಾ-2 ನಮ್ಮನ್ನು ಚೌಡ್ಲು ಗ್ರಾಮ ಕಾನ್ವೆಂಟ್ ಬಾಣೆಯ ರಾಜಣ್ಣ ನವರ ಅಂಗಡಿಯ ಒತ್ತಾಗಿ ತಮ್ಮಣ್ಣ ಎಂಬುವವರ ಮನೆಗೆ ಹೋಗುವ ಸೀಮೆಂಟ್ ರಸ್ತೆಯಲ್ಲಿ ಆರೋಪಿ ಪ್ರಾಸಾ-1 ರವರಿಗೆ ಕೋವಿಯಿಂದ ಗುಂಡು ಹಾರಿಸಿದ ಸ್ಥಳ ಎಂದು ತೋರಿಸಿ ಕೊಟ್ಟ ಮೇರೆಗೆ ನಿಪಿ-3 ರಂತೆ ಮಹಜರ್ ತಯಾರಿಸಿರುತ್ತೇನೆ. ಆ ಸಂದರ್ಭದಲ್ಲಿ ಪ್ರಾಸಾ-1 ರವರ KA-12-R -6102 ರ Bullet bike ಅನ್ನು ಅಮಾತ್ತು ಪಡಿಸಿಕೊಂಡಿರುತ್ತೇನೆ. ನಿಪಿ-3 ರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-3(ಸಿ) ಎಂದು ಗುರುತಿಸಲಾಯಿತು. ನಿಪಿ-3 ರ ಸಂದರ್ಭದಲ್ಲಿ ಫೋಟೊಗಳನ್ನು ತೆಗೆದಿರುತ್ತೇನೆ. ಅಮಾನತ್ತುಪಡಿಸಿಕೊಂಡ ವಸ್ತುಗಳನ್ನು ಠಾಣಾ

ಮಾಲುಪಟ್ಟಿಯಲ್ಲಿ ಸೇರಿಸಿ ನ್ಯಾಯಾಲಯಕ್ಕೆ ವರದಿ ಮಾಡಿಕೊಂಡಿರುತ್ತೇನೆ. ಅದೇ ದಿನ ಚಾಸಾ-12 ಮತ್ತು ಚಾಸಾ-25 ರವರು ಮಡಿಕೇರಿ ಜಿಲ್ಲಾ ಆಸ್ಪತ್ರೆಯಿಂದ ಪ್ರಾಸಾ-1 ರವರು ಧರಿಸಿದ್ದ ಬಟ್ಟೆಗಳು ಹಾಗೂ ಅವರು ದೇಹದಲ್ಲಿ ಇದ್ದ ಪೆಲೆಟ್ಸ್ ಗಳ ಒಂದು ಡಬ್ಬವನ್ನು ಕಳುಹಿಸಿಕೊಟ್ಟಿದ್ದು , ಪಂಚರ ಸಮಕ್ಷಮ ಬಟ್ಟೆಗಳನ್ನು ಪ್ರತ್ಯೇಕ-ಪ್ರತ್ಯೇಕವಾಗಿ ಬಿಳಿ ಬಟ್ಟೆಯಿಂದ ಪ್ಯಾಕ್ ಮಾಡಿ , ಸೀಲು ಮಾಡಿ ನಿಪಿ-6 ರ ಮಹಜರ್ ನ ಮುಖಾಂತರ ಅಮಾನತ್ತು ಪಡಿಸಿಕೊಂಡಿರುತ್ತೇನೆ. ನಿಪಿ-6 ರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-6(ಸಿ) ಎಂದು ಗುರುತಿಸಲಾಯಿತು. ನಿಪಿ-6 ರ ಸಂದರ್ಭದಲ್ಲಿ ಫೋಟೊಗಳನ್ನು ತೆಗೆದಿದ್ದು , ಅವುಗಳನ್ನು ನಿಪಿ-7 ಎಂದು ಗುರುತಿಸಲಾಯಿತು. ನಾನು ಅಮಾನತ್ತು ಪಡಿಸಿಕೊಂಡ ಬಟ್ಟೆಗಳನ್ನು ಹಾಗೂ ಚಿಲ್ಲುಗಳನ್ನು ಕಹೊಂದಿದ ಪ್ಲಾಸ್ಟಿಕ್ ಡಬ್ಬವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮು.ಮಾ 2 ರಿಂದ 5 ಎಂದು ಈಗಾಗಲೇ ಗುರುತಿಸಲಾಗಿದೆ. ಅದೇ ದಿನ ಪ್ರಾಸಾ-14 ರವರಿಗೆ ಆರೋಪಿಯನ್ನು ಪತ್ತೆ ಹಚ್ಚಲು ಜ್ಞಾಪನ ನೀಡಿರುತ್ತೇನೆ. ಅದೇ ದಿನ ಮಡಿಕೇರಿ ಜಿಲ್ಲಾ ಆಸ್ಪತ್ರೆಯ ವೈದ್ಯಾಧಿಕಾರಿಗಳಿಗೆ ಗಾಯಾಳುವಿನ ರಕ್ತದ ಮಾದರಿಯನ್ನು ತಿಳಿಸುವಂತೆ ಪತ್ರ ಬರೆದಿರುತ್ತೇನೆ. ಅದೇ ಪ್ರಾಸಾ-15 ರವರ ಹೇಳಿಕೆಯನ್ನು ಮಾಡಿಕೊಂಡಿರುತ್ತೇನೆ.

4. ದಿನಾಂಕ 22-10-2019 ರಂದು ಸೋಮವಾರಪೇಟೆಯ ವೃತ್ತ ಕಛೇರಿಗೆ ತೆರಳಿ ಪ್ರಾಸಾ-14 ರವರು ಆರೋಪಿಯನ್ನು ಪತ್ತೆಹಚ್ಚಿ ನಿಪಿ-17

ರಂತೆ ವರದಿಯನ್ನು ನೀಡಿ ನನ್ನ ಎದುರು ಹಾಜರು ಪಡಿಸಿರುತ್ತಾರೆ. ಆರೋಪಿಯನ್ನು ವಿಚಾರಣೆ ನಡೆಸಿ ಆತನ ಸ್ವ-ಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಆರೋಪಿತನ ಸ್ವ-ಇಚ್ಛಾ ಹೇಳಿಕೆಯಲ್ಲಿ ತನ್ನನ್ನು ಕರೆದುಕೊಂಡು ಹೋದರೆ ತಾನು ಕೃತ್ಯಕ್ಕೆ ಉಪಯೋಗಿಸಿದ ಕೋವಿಯನ್ನು ಹಾಗೂ ಜೆನ್ ಕಾರನ್ನು ಹಾಗೂ ಸೂಜೀತನಿಗೆ ಕೋವಿಯಿಂದ ಗುಂಡು ಹೊಡೆದ ಸ್ಥಳವನ್ನು ತೋರಿಸಿಕೊಡುವಂತೆ ಹೇಳಿರುತ್ತಾರೆ. ಸದರಿ ಹೇಳಿಕೆಯ ಭಾಗವನ್ನು ನಿಪಿ-31 ಎಂದು ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-31(ಎ) ಎಂದು ಗುರುತಿಸಲಾಯಿತು. ಆ ಬಳಿಕ ಜಪ್ರಾಸಾ-8 ಹಾಗೂ ಪ್ರಾಸಾ-9 ರವನ್ನು ಕಛೇರಿಗೆ ಬರಮಾಡಿಕೊಂಡು ಅವರಿಗೆ ನೋಟಿಸ್ಸು ಜಾರಿ ಮಾಡಿ ನಂತರ ಇಲಾಖಾ ಜೀಪಿನಲ್ಲಿ ಆರೋಪಿಯನ್ನು ಕರೆದುಕೊಂಡು ತನ್ನ ಮನೆಯಾದ ಚೌಡ್ಲು ಗ್ರಾಮದ ಕಾನ್ವೆಂಟ್ ಬಾಣೆಯಲ್ಲಿರುವ ತನ್ನ ಮನೆಗೆ ಕರೆದುಕೊಂಡು ಹೋಗಿ ಮನೆಯ ಹಾಲಿಗೆ ಹೊಂದಿಕೊಂಡಂತೆ ಇರುವ ರೂಮಿನ ಒಳಗಡೆ ಮುಂದಾಗಿ ಹೋಗಿ ರೂಮಿನ ಎಡಭಾಗದಲ್ಲಿ ಗೋಡೆಗೆ ಹೊಂದಿಕೊಂಡಂತೆ ಇರುವ ಗಾಡ್ರೇಜಿನ ಒಳಗೆ ಕೃತ್ಯಕ್ಕೆ ಉಪಯೇಗಿಸಿರುವ ಒಂದು ಕೋವಿಯನ್ನು ಹಾಜರು ಪಡಿಸಿ ಅದನ್ನು ತೆರೆದು ನೋಡಲಾಗಿ ಅದರಲ್ಲಿ ಅದು ಸದರಿ ಕೋವಿ 12 ಬೋರಿನ DBBL ಗನ್ ಆಗಿರುತ್ತದೆ. ಸದರಿ ಗನ್ನನ್ನು ತೆರೆದು ನೋಡಿದಾಗ ಅದರ ಒಳಗೆ ಒಂದು ಕಾಲಿ ತೋಟೆ ಇತ್ತು. ಕೋವಿ ಹಾಗೂ ತೋಟೆಯನ್ನು ಪಂಚರ ಸಮಕ್ಷಮ ಬಿಳಿ ಬಟ್ಟೆಯಿಂದ ಪ್ಯಾಕ್ ಮಾಡಿ ಸೀಲು ಮಾಡಿ ಪಂಚರ ಸಮಕ್ಷಮ ಮಹಜರ್ ನೋಂದಿಗೆ ಅಮಾನತ್ತು ಪಡಿಸಿಕೊಂಡಿರುತ್ತೇನೆ. ಈಗ ನಾನು

ನೋಡುತ್ತಿರುವ ಮಹಜರ್ ಅದನ್ನು ಆ ಸಂದರ್ಭದಲ್ಲಿ ತಯಾರಿಸಲಾಗಿದ್ದು ಅದನ್ನು **ನಿಪಿ**-8 ಎಂದು ಗುರುತಿಸಲಾಗಿದ್ದು, ಅದರಲ್ಲಿ ಇರುವ ಸಾಕ್ಷಿ ಸಹಿಯನ್ನು **ನಿಪಿ**-8(ಎ) ಎಂದು ಗುರುತಿಸಲಾಯಿತು. ಮಹಜರ್ ಸಂದರ್ಭದಲ್ಲಿ ಒಂದು ಕಾಲಿ ತೋಟೆ , ಆಯುಧ ಪರವಾನಿಗೆ ದಾಖಲೆಯನ್ನು ಸಹ ಆರೋಪಿ ಹಾಜರು ಪಡಿಸಿದ್ದು ಅವುಗಳನ್ನು ಸಹ ಮಹಜರ್ನ ಅಡಿಯಲ್ಲಿ ಅಮಾನತ್ತು ಪಡಿಸಿಕೊಳ್ಳಲಾಯಿತು. ಅದೇ ರೀತಿ ಆರೋಪಿ ತಾನು ಕೃತ್ಯಕ್ಕೆ ಉಪಯೋಗಿಸಿದ್ದ ಜೆನ್ ಕಾರು , ಹಾಗೂ ಆರ .ಸಿ ಪುಸ್ತಕವನ್ನು ಹಾಜರು ಪಡಿಸಿದ ಮೇರೆಗೆ ಅದನ್ನು ಸಹ ಮೇಲೆ ಹೇಳಿದ ರೀತಿ ಸಂಜೆ 4 .00 ಗಂಟೆಯಿಂದ 5.15 ಗಂಟೆಯವರೆಗೆ ಮಹಜರ್ ಮೂಲಕ ಅಮಾನತ್ತು ಪಡಿಸಿಕೊಂಡಿರುತ್ತೇನೆ. ಸದರಿ ಜೆನ್ ಕಾರೂ ಚಾಸಾ-9 ರವರ ಹೆಸರಿನಲ್ಲಿ ಇದ್ದಿರುತ್ತದೆ. ನಿಪಿ-8 ರ ಸಂದರ್ಭದಲ್ಲಿ ಫೋಟೊಗಳನ್ನು ತೆಗೆದಿದ್ದು ಅವುಗಳನ್ನು ನಿಪಿ-10 ಎಂದು ಈಗಾಗಲೇ ಗುರುತಿಸಲಾಗಿದೆ. ನಾನು ಅಮಾನತ್ತು DBBL ಗನ್ನನ್ನು ಹಾಗೂ ಕಾಲಿ ತೋಟೆ ಯನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ ಮು.ಮಾ1 ಹಾಗೂ 6 ಎಂದು ಗುರುತಿಸಲಾಗಿದೆ. ಆರೋಪಿ ಹಾಜರು ಪಡಿಸಿದ gun exemption certificate ಹಾಗೂ R.C ಪುಸ್ತಕವನ್ನು ಸಾಕ್ಷಿ ನೋಡಿ ಗುರುತಿಸಿದ್ದು , ಅವುಗಳನು ಈಗಾಗಲೇ ನಿಪಿ-11 ಹಾಗು 12 ಎಂದು ಗುರುತಿಸಲಾಗಿದೆ. ನಂತರ ಆರೋಪಿ ನಮ್ಮ ಘಟನಾ ಸ್ಥಳಕ್ಕೆ ಕರೆದುಕೊಂಡು ಹೋಗಿ ಈ ಹಿಂದೆ ನಿಪಿ-3 ರ ಮಹಜರ್ ತಯಾರಿಸಿದ ಸ್ಥಳಕ್ಕೆ ಕರೆದುಕೊಂಡು ಹೋಗಿ ಸದರಿ ಜಾಗದಲ್ಲಿ ಆರೋಪಿ ಪ್ರಾಸಾ-1 ರವರಿಗೆ ಗುಂಡು ಹೊಡೆದಿದ್ದೆನೆ

ಎಂದು ಹೇಳಿದ ಮೇರೆಗೆ ನಿಪಿ-9 ರಂತೆ ಮಹಜರ್ ತಯಾರಿಸಿರುತ್ತೇನೆ. ನಿಪಿ-9 ರಲ್ಲಿ ಇದ್ದ ಸಾಕ್ಷಿ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ಅದೇ ದಿನ ಸೋಮವಾರಪೇಟೆಯ ತಹಶೀಲ್ದಾರರಿಗೆ ಪ್ರಾಸಾ-1 ಹಾಗೂ ಆರೋಪಿಯ ಜಾತಿ ಪ್ರಮಾಣ ಪತ್ರವನ್ನು ನೀಡುವಂತೆ ಪತ್ರ ಬರೆದಿರುತ್ತೇನೆ. ಅದೇ ರೀತಿ ವೈದ್ಯಾಧಿಕಾರಿಗಳಿಗೆ ಪ್ರಾಸಾ-1 ರವರ ಗಾಯದ ಪ್ರಮಾಣ ಪತ್ರವನ್ನು ನೀಡುವಂತೆ ಪತ್ರ ಬರೆದಿರುತ್ತೇನೆ. ಅದೇ ದಿನ ಚೌಡ್ಲು ಗ್ರಾಮದ PDO ಗೆ ಪ್ರಾಸಾ-1 ಹಾಗೂ ಆರೋಪಿಯ ವಾಸದ ದೃಢೀಕರಣ ಪತ್ರವನ್ನು ನೀಡುವಂತೆ ಪತ್ರ ಬರೆದಿರುತ್ತೇನೆ. ಅದೇ ದಿನ ಚಾಸಾ-9 ರವರ ಹೇಳಿಕೆಯನ್ನು ಮಾಡಿಕೊಂಡಿರುತ್ತೇನೆ. ಆ ಬಳಿಕ ಆರೋಪಿಯನ್ನು remand ಅರ್ಜಿಯೊಂದಿಗೆ ನ್ಯಾಯಾಧೀಶರ ಎದುರು ಹಾಜರು ಪಡಿಸಿರುತ್ತೇನೆ.

5. ದಿನಾಂಕ 24-10-2019 ರಂದು ಮೈಸೂರಿನ JSS ಆಸ್ಪತ್ರೆಯ ವೈದ್ಯಾಧಿಕಾರಿಗಳು ಪ್ರಾಸಾ-1 ರವರ ದೇಹದಿಂದ ಸಂಗ್ರಹಿಸಿಕೊಟ್ಟ ಪೆಲೆಟ್ಸ್ ಗಳನು ಒಂದು ಡಬ್ಬಕ್ಕೆ ಹಾಕಿ ಸೀಲು ಮಾಡಿ ಪ್ರಾಸಾ-13 ರವರ ಮುಖಾಂತರ ಕಳುಹಿಸಿಕೊಟ್ಟಿದ್ದನ್ನು ಸ್ವೀಕರಿಸಿರುತ್ತೇನೆ. ಆ ಬಳಿಕ ಅವುಗಳನ್ನು ಪ್ರಾಸಾ-12 ಹಾಗೂ ಚಾಸಾ-16 ರವರ ಸಮಕ್ಷಮ ನಿಪಿ-16 ರ ಮಹಜರ್ ನೊಂದಿಗೆ ಅಮಾನತ್ತುಪಡಿಸಿಕೊಂಡಿರುತ್ತೇನೆ. ನಿಪಿ-16 ರ ಮಹಜರನಲ್ಲಿ ಇದ್ದ ಸಾಕ್ಷಿ ಸಹಿಯನ್ನು ನಿಪಿ-16(ಸಿ) ಎಂದು ಗುರುತಿಸಲಾಯಿತು. ಅದೇ ದಿನ ಪ್ರಾಸಾ-13 ರವರ ಹೇಳಿಕೆಯನ್ನು ಮಾಡಿಕೊಂಡಿರುತ್ತೇನೆ.

6. ದಿನಾಂಕ 03-11-2019 ರಂದು ಚಾಸಾ-26 ರವರೊಂದಿಗೆ ವಶಪಡಿಸಿಕೊಂಡ ವಸ್ತುಗಳನ್ನು ಚಾಸಾ-26 ರವರ ಮುಖಾಂತರ FSL ಬೆಂಗಳೂರು ಹಾಗೂ ಮೈಸೂರಿನ RFSL ಗೆ ಕಳುಹಿಸಿಕೊಟ್ಟಿರುತ್ತೇನೆ.

7. ದಿನಾಂಕ 05-11-2019 ರಂದು ಚಾಸಾ-26 ರವರು FSL ಬೆಂಗಳೂರು ಹಾಗೂ ಮೈಸೂರಿನ RFSL ರವರು ನೀಡಿದ ಬಗ್ಗೆ ಸ್ವೀಕೃತಿಯನ್ನು ಪಡೆದುಕೊಂಡು ಅವರ ಹೇಳಿಕೆಯನ್ನು ಮಾಡಿಕೊಂಡಿರುತ್ತೇನೆ.

8. ದಿನಾಂಕ 18-11-2019 ರಂದು J.S.S ಆಸ್ಪತ್ರೆಯ ವೈದ್ಯಾಧಿಕಾರಿಗಳಿಗೆ ಪ್ರಾಸಾ-1 ರವರ ಗಾಯದ ಪ್ರಮಾಣ ಪತ್ರ ಹಾಗೂ ದಾಖಲಾತಿಗಳನ್ನು ಕೋರಿ ಪತ್ರ ಬರೆದಿರುತ್ತೇನೆ. ದಿನಾಂಕ 19-11-2019 ರಂದು JSS ಆಸ್ಪತ್ರೆ ರವರು ನೀಡಿದ ಗಾಯದ ಪ್ರಮಾಣ ಪತ್ರ ಹಾಗೂ ದಾಖಲಾತಿಗಳನ್ನು ನಿಪಿ-25 ರಂತೆ ಸ್ವೀಕರಿಸಿರುತ್ತೇನೆ.

9. ದಿನಾಂಕ 28-11-2019 ರಂದು ಪ್ರಾಸಾ-1 ರವರ ಮರುಹೇಳಿಕೆಯನ್ನು ಹಾಗೂ ಚಾಸಾ-3 ರಿಂದ ಚಾಸಾ-6 ರವರ ಹೇಳಿಕೆಗಳನ್ನು ಮಾಡಿಕೊಂಡಿರುತ್ತೇನೆ.

10. ದಿನಾಂಕ 29-11-2019 ರಂದು ಚಾಸಾ-2, ಚಾಸಾ-7 ಮತ್ತು ಚಾಸಾ-8 ರವರ ಹೇಳಿಕೆಯನ್ನು ಮಾಡಿಕೊಂಡಿರುತ್ತೇನೆ.

11. ದಿನಾಂಕ 06-12-2019 ರಂದು ಕೊಡಗು ಜಿಲ್ಲಾ ಆಸ್ಪತ್ರೆಯಿಂದ ಪ್ರಾಸಾ-1 ರವರ ಡಿಸ್ ಚಾರ್ಜ್ ಸಮ್ಮರಿ ಹಾಗೂ X-ray ವರದಿಯನ್ನು ನಿಪಿ-13 ಹಾಗೂ ನಿಪಿ-14 ರಂತೆ ಪಡೆದುಕೊಂಡಿರುತ್ತೇನೆ.

12. ದಿನಾಂಕ 10-12-2019 ರಂದು ಮಾನ್ಯ ಜಿಲ್ಲಾಧಿಕಾರಿ, ಕೊಡಗು ರವರಿಗೆ ಪತ್ರ ಬರೆದು ಆರೋಪಿಯನ್ನು ಸಶಸ್ತ್ರ ಕಾಯ್ದೆಯಡಿಯಲ್ಲಿ ಅಭಿಯೋಜನೆಗೊಳಿಸಲು ಅನುಮತಿ ಪಡೆದುಕೊಂಡಿರುತ್ತೇನೆ. ಈಗ ನಾನು ನೋಡುತ್ತಿರುವ ನಡವಳಿ ನಾನು ಸ್ವೀಕರಿಸಿದ್ದ ನಡವಳಿ ಆಗಿದ್ದು, ಅದನ್ನು ನಿಪಿ-32 ಎಂದು, ಅದರಲ್ಲಿ ಇರುವ ಸಾಕ್ಷಿ ಸಹಿಯನ್ನು ನಿಪಿ-32(ಎ) ಎಂದು ಗುರುತಿಸಲಾಯಿತು.

13. ದಿನಾಂಕ 11-12-2019 ರಂದು ಪ್ರಕರಣದಲ್ಲಿ ಸೋಮವಾರಪೇಟೆ ತಶೀಲ್ದಾರ್ ರವರು ಪ್ರಾಸಾ-1 ಹಾಗೂ ಆರೋಪಿಯ ಜಾತಿ ಪ್ರಮಾ ಣಪತ್ರ ನೀಡಿದ್ದು ಅದನ್ನು ಪಡೆದುಕೊಂಡಿರುತ್ತೇನೆ. ಅದರಂತೆ ಪ್ರಾಸಾ-1 ಪರಿಶಿಷ್ಟ ಜಾತಿಯ ಭೋವಿ ಜನಾಂಗಕ್ಕೆ ಸೇರಿದ್ದು, ಆರೋಪಿ ಕೊಡವ ಜಾತಿಗೆ ಸೇರಿದ್ದವರು ಆಗಿರುತ್ತಾರೆ. ಸದರಿ ಜಾತಿ ಪ್ರಮಾಣ ಪತ್ರವನ್ನು ಹಾಗೂ ಅದರ ಜೊತೆ ಇರುವ ಆರೋಪಿ ಹಾಗೂ ಪ್ರಾಸಾ-1 ರವರ ಜಾತಿ ಪ್ರಮಾಣ ಪತ್ರದನಮೂನೆಯನ್ನು ಒಟ್ಟಾಗಿ ನಿಪಿ-33 ಎಂದು ಅದರನ್ನು ಸ್ವೀಕರಿಸಿದ್ದ ಬಗ್ಗೆ ಸಾಕ್ಷಿ ಸಹಿಯನ್ನು ನಿಪಿ-33(ಎ) ಎಂದು ಗುರುತಿಸಲಾಯಿತು.

14. ದಿನಾಂಕ 13-12-2019 ರಂದು ಚಾಸಾ-26 ರವರಿಂದ ತನಿಖಾ ಸಂದರ್ಭದಲ್ಲಿ ತೆಗೆದ ಫೋಟೊಗಳನ್ನು ಹಾಗೂ ವಿಡಿಯೋಗಳನ್ನು, ಅದೇ ರೀತಿ ಕಲಂ 65(ಬಿ) ಅಡಿಯಲ್ಲಿ ದೃಢೀಕರಣ ಪತ್ರವನ್ನು ಪಡೆದುಕೊಂಡಿರುತ್ತೇನೆ. ಈಗ ನಾನು ನೋಡುತ್ತಿರುವ ದೃಢೀಕರಣ ಪತ್ರ ನಾನು ಪಡೆದುಕೊಂಡ ದೃಢೀಕರಣ ಪತ್ರ ಆಗಿದ್ದು, ಅದನ್ನು ನಿಪಿ-34 ಎಂದು, ಅದರಲ್ಲಿ ಇರುವ ಸಾಕ್ಷಿ ಸಹಿಯನ್ನು ನಿಪಿ-34(ಎ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ-23 ರವರಿಂದ ಪ್ರಾಸಾ-1 ರವರ ಗಾಯದ ಪ್ರಮಾಣ ಪತ್ರವನ್ನು ನಿಪಿ-19 ರಂತೆ ಪಡೆದುಕೊಂಡಿರುತ್ತೇನೆ. ನಂತರ ಮುಂದಿನ ತನಿಖೆಯನ್ನು ಬಾಕಿ ಇರಿಸಿ ಆರೋಪಿಯ ವಿರುದ್ಧ ದೋಷಾರೋಪಣಾ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಈಗ ನಾನು ನೋಡುತ್ತಿರುವ ದಾಖಲೆ ನಾನು J.S.S ಆಸ್ಪತ್ರೆಯಿಂದ ಪಡೆದ ಪ್ರಾಸಾ-1 ರವರ ರಕ್ತದ ಮಾದರಿಯ ಬಗ್ಗೆ ನೀಡಿದ ದಾಖಲೆ ಆಗಿದ್ದು, ಅದನ್ನು ನಿಪಿ-35 ಎಂದು, ಅದನ್ನು ಸ್ವೀಕರಿಸಿದ್ದ ಬಗ್ಗೆ ಸಾಕ್ಷಿ ಸಹಿಯನ್ನು ನಿಪಿ-35(ಎ) ಎಂದು ಗುರುತಿಸಲಾಯಿತು. ಆ ಪ್ರಕಾರ ಪ್ರಾಸಾ-1 ರವರ ರಕ್ತದ ಮಾದರಿ 'O' positive ಆಗಿರುತ್ತದೆ. ಪ್ರಾಸಾ-5 ನಿಪಿ-5 ರಂತೆ ನನ್ನ ಮುಂದೆ ಹೇಳಿಕೆ ನೀಡಿರುತ್ತಾರೆ.

**ಪಾಟೀಸವಾಲು- ಆರೋಪಿ ಪರವಾಗಿ ಶ್ರೀ. ಎ.ಜಿ.ಜಿ. ವಕೀಲರಿಂದ:**

15. ಪ್ರಾಸಾ-1 ಹಾಗೂ ಪ್ರಾಸಾ-2 ದೊಡ್ಡಪ್ಪ-ಚಿಕ್ಕಪ್ಪನ ಮಕ್ಕಳು ಎಂದರೆ ಸರಿ. ನನಗೆ ದೂರು ಬಂದಾಗ ನಾನು ಕಕ್ಕೆಹೊಳೆಗೆ ಹೋಗಿದ್ದೆ ಅಲ್'ಲಿ

ಒಂದು ಪೆಟ್ರೋಲ್ ಬಂಕ್ ಇದೆ. ಪೆಟ್ರೋಲ್ ಬಂಕ್ ನಲ್ಲಿ ಸಿಸಿ ಕ್ಯಾಮರ ಇದ್ದಿರಲಿಲ್ಲ. ಆ ಬಗ್ಗೆ ನಾನು ವಿಚಾರಣೆ ಮಾಡಿದ್ದೇನೆ ಆದರೆ ಅಲ್ಲಿ ಸಿಸಿ ಕ್ಯಾಮರ ಇದ್ದಿರಲಿಲ್ಲ. ಪ್ರಾಸಾ-1 ಪರಿಶಿಷ್ಟ ಜಾತಿಗೆ ಸೇರಿದ್ದವರು ಎಂದು ಜಾತಿ ಪ್ರಮಾಣ ಪತ್ರದಲ್ಲಿ ಬರೆದಿದೆ. ಈಗ ನಾನು ನೋಡುತ್ತಿರುವ ದಾಖಲೆ ಪ್ರಾಸಾ-1 ರವರ ವರ್ಗಾವಣೆ ಪ್ರಮಾಣ ಪತ್ರ ಎಂದರೆ ಸಾಕ್ಷಿ ನನಗೆ ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ಭೋವಿ ಜನಾಂಗ ಪರಿಶಿಷ್ಟ ಜಾತಿಗೆ ಬರುತ್ತದೋ, ಇಲ್ಲವೋ ಎಂದು ನಾನು ಸಮಾಜ ಕಲ್ಯಾಣ ಇಲಾಖೆಗೆ ಕೇಳುವುದಿಲ್ಲ ಏಕೆಂದರೆ ತಹಶೀಲ್ದಾರ್ ರವರು ನಮಗೆ ಪ್ರಮಾಣ ಪತ್ರ ನೀಡುತ್ತಾರೆ. ಈಗ ನಾನು ನೋಡುತ್ತಿರುವ ದಾಖಲೆ ಸಮಾಜ ಕಲ್ಯಾಣ ಇಲಾಖೆಯವರು ನೀಡಿದ ದಾಖಲೆ ಆಗಿದ್ದು, ಭೋವಿ ಜನಾಂಗ ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಇರುವುದಿಲ್ಲ ಎಂದು ಇದೆ ಎಂದರೆ ಸರಿ. ಸದರಿ ದಾಖಲೆಯನ್ನು **ನಿಡಿ-5** ಎಂದು ರುಜುವಾತುಪಡಿಸುವ ಷರತ್ತಿನ ಮೇರೆಗೆ ಗುರುತಿಸಲಾಯಿತು. ಈಗ ನಾನು ನೋಡುತ್ತಿರುವ ಇನ್ನೊಂದು ದಾಖಲೆ ಹಿಂದೂಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ನೀಡಿದ್ದು, ಆ ಪ್ರಕಾರ ಭೋವಿ ಜನಾಂಗ ಹಿಂದೂಳಿದ ಜಾತಿಯಲ್ಲಿ ಪ್ರ-ವರ್ಗಗಳಲ್ಲಿ ಉಪಜಾತಿಯಾಗಿ ಸೇರಿರುತ್ತದೆ ಎಂದು ಬರೆದಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ದಾಖಲೆಯಲ್ಲಿ ಪರಿಶಿಷ್ಟ ಜಾತಿಯಲ್ಲಿ ಉಪಜಾತಿಯಾಗಿ ಸೇರಿರುತ್ತದೆ ಎಂದು ಬರೆದಿದೆ ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ನಿಡಿ-6 ಎಂದು ಆರೋಪಿ ರುಜುವಾತುಪಡಿಸುವ ಷರತ್ತಿಗೆ ಒಳಪಟ್ಟು ಗುರುತಿಸಲಾಯಿತು. ನಿಡಿ-2 ರಲ್ಲಿ ಬೋವಿ ಎಂದು ಬರೆದೆ, 2 ನೇ ಕಾಲಂ ನಲ್ಲಿ ಭೋವಿ ಎಂದು ಬರೆದಿದೆ

ಎಂದರೆ ಸರಿ. ನಿಪಿ-33 ರಲ್ಲಿ ಪ್ರಾಸಾ-1 ಭೋವಿ ಜನಾಂಗಕ್ಕೆ ಸೇರಿದವರು ಎಂದು ಬರೆದಿದೆ ಎಂದರೆ ಸರಿ.

**ಮುಂದುವರೆದ ಪಾಟೀಸವಾಲಿಗೆ ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-xxx

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು, ಮಡಿಕೇರಿ

**ಸಾಕ್ಷಿಯನ್ನು ದಿನಾಂಕ 15-01-2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟೀಸವಾಲು- ಆರೋಪಿ ಪರವಾಗಿ ಶ್ರೀ. ಎ.ಜಿ.ಜಿ. ವಕೀಲರಿಂದ:**

16. ಆರೋಪಿಯ ಹೆಂಡತಿ ಅದೇ ದಿನ ಬಂದು ಠಾಣೆಯಲ್ಲಿ ಒಂದು ದೂರು ನೀಡಿದ್ದು, ಆ ಬಗ್ಗೆ ನಾನು ವಿಚಾರಣೆ ಮಾಡಿಲ್ಲ. ದಿನಾಂಕ 20-10-2019 ರಂದು ನಿಡಿ-3 ರಂತೆ ಆರೋಪಿಯ ಹೆಂಡತಿ ದೂರು ನೀಡಿದ್ದಳು

ಎಂದರೆ ಸರಿ. ನಿಡಿ-5 ರ ಪ್ರಕಾರ ಬೋವಿ ಮತ್ತು ಭೋವಿ ಜನಾಂಗ ಬೇರೆ ಬೇರೆ ಎಂದರೆ ಸರಿ. ಬೋವಿ ಜನಾಂಗ ಪರಿಶಿಷ್ಟ ಜಾತಿಯಲ್ಲಿ ಬರುವುದಿಲ್ಲ ಮತ್ತು ಭೋವಿ ಜನಾಂಗ ಪರಿಶಿಷ್ಟ ಜಾತಿಯಲ್ಲಿ ಬರುತ್ತದೆ ಎಂದರೆ ಸರಿ. ಪ್ರಾಸಾ-1 ರವರ ಶಾಲಾ ದಾಖಲಾತಿಗಳನ್ನು ನಾನು ಪರಿಶೀಲಿಸಿಲ್ಲ. ಆ ಕಾರಣದಿಂದ ಪ್ರಾಸಾ-1 ರವರ ನಿರ್ದಿಷ್ಟವಾದ ಜಾತಿ ಇದು ಎಂದು ನನಗೆ ಹೇಳಲು ಬರುವುದಿಲ್ಲ. ನಿಪಿ-17 ರ ಪ್ರಕಾರ ಆರೋಪಿಯನ್ನು ಕಾಫಿ ತೋಟದಿಂದ ವಶಕ್ಕೆ ಪಡೆದುಕೊಂಡಿದ್ದೇವೆ. ಆರೋಪಿಯನ್ನು ಕಾಫಿ ತೋಟದಿಂದ ವಶಪಡಿಸಿಕೊಂಡಿದ್ದೇನೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ ಮತ್ತು ನಿಪಿ-17 ನ್ನು ನಾನೇ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ಹೆಂಡತಿ ದೂರು ನೀಡಿದ ಬಗ್ಗೆ ನನ್ನ ಬಳಿ ಹೇಳಿರುವುದು ನನಗೆ ನೆನಪಿಲ್ಲ. ಪ್ರಾಸಾ-1 ಮಡಿಕೇರಿ ಜಿಲ್ಲಾ ಆಸ್ಪತ್ರೆಯಲ್ಲಿ ನೀಡಿದ ಹೇಳಿಕೆಯ ಆಧಾರದಲ್ಲಿ ನಾವು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿ. ನಿಪಿ-1 ನ್ನು ಸಹ ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ.

17. ಪ್ರಾಸಾ- 1 ರವರ ಕಾಲ್ ರಿಜಿಸ್ಟರ್ ನ್ನು ನಾನು ಪರಿಶೀಲಿಸಿಲ್ಲ. ನಿಪಿ-1 ರ ಪ್ರಕಾರ ಕಕ್ಕೆಹೊಳೆಯಲ್ಲಿ ಆರೋಪಿ ಪ್ರಾಸಾ-1 ರವರಿಗೆ ಬೈದಿದ್ದಾರೆ ಎಂದು ಹೇಳಲಾಗುವ ಸಮಯ ಸುಮಾರು 6.00 ಗಂಟೆ. ಪ್ರಾಸಾ-1 ಆರೋಪಿಗೆ ಫೋನ್ ಮಾಡಲಾದ ಸಮಯ ನಿಪಿ-26 ರಂತೆ 7:28 p.m . ಆ ಪ್ರಕಾರ 69 ಸೆಕೆಂಡುಗಳ ಕಾಲ ಪ್ರಾಸಾ-1 ಆರೋಪಿಯ ಜೊತೆ ಮಾತನಾಡಿದ್ದಾರೆ. 6.00 ಗಂಟೆಗೆ ಪ್ರಾಸಾ-1 6363616654 ನಂಬರ್ ಗೆ

401 ಸೆಕೆಂಡುಗಳ ಕಾಲ ಮಾತನಾಡಿದ್ದಾರೆ ಎಂದರೆ ಸರಿ. 6.21 ಸಮಯಕ್ಕೆ ಅದೇ ನಂಬರ್ ನಿಂದ ಪ್ರಾಸಾ-1 ರವರ ಮೊಬೈಲ್ ಗೆ 69 ಸೆಕೆಂಡುಗಳ ಕಾಲ ಫೋನ್ ಬಂದಿದೆ ಎಂದರೆ ಸರಿ. 6.31 ಗಂಟೆಗೆ ಅದೇ ನಂಬರ್ ನಿಂದ ಪ್ರಾಸಾ-1 ರವರ ಮೊಬೈಲ್ ಗೆ 1036 ಸೆಕೆಂಡ್ ಗಳ ಕಾಲ ಮಾತನಾಡಿದ್ದಾರೆ ಎಂದರೆ ಸರಿ. ಒಂದೇ ನಂಬರ್ ನಿಂದ 1506 ಸೆಕೆಂಡ್ ಗಳ ಕಾಲ ಪ್ರಾಸಾ-1 ರವರ ಮೊಬೈಲ್ ಗೆ ಮಾತನಾಡಿರುವುದು ನಿಪಿ-26 ರಂತೆ ಕಂಡು ಬಂದಿರುತ್ತದೆ ಎಂದರೆ ಸರಿ ಮತ್ತು ಈ ಬಗ್ಗೆ ತನಿಖೆ ನಾನು ಮಾಡಿಲ್ಲ. ನಿಪಿ-26 ರ ದಿನಾಂಕ 30-08-2020 ರಂದು ನನಗೆ 05-01-2020 ಕ್ಕೆ ವರ್ಗಾವಣೆ ಆಗಿತ್ತು. ಅಂತಿಮ ವರದಿಯನ್ನು ದಿನಾಂಕ 19-12-2019 ರಂದು ದಾಖಲು ಮಾಡಿದ್ದೇನೆ. ಪ್ರಾಸಾ-1 1506 ಸೆಕೆಂಡುಗಳ ಕಾಲ ಇನ್ನೊಂದು ಮೊಬೈಲ್ ನಂಬರ್ ಗೆ ಕಾಲ್ ಮಾಡಿರುವುದು ಆರೋಪಿಯ ಮೇಲೆ ಪ್ರಕರಣ ದಾಖಲಿಸಲು ಮತ್ತು ಅವರ ಮೇಲೆ ಹಲ್ಲೆ ಮಾಡಲು ಈ ರೀತಿಯಾಗಿ ಪ್ಲಾನ್ ಮಾಡಿರುವುದಾಗಿದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತನಿಖೆ ಸಂದರ್ಭದಲ್ಲಿ ಈ ವಿಚಾರ ನನಗೆ ಗೊತ್ತಾಗಿದ್ದರೂ ಅದನ್ನು ನಾನು ಮುಚ್ಚಿ ಹಾಕಿದ್ದೇನೆ ಎಂದರೆ ಸರಿಯಲ್ಲ. ಆ ಕಾರಣದಿಂದ ಪ್ರಾಸಾ-1 ರವರೇ ಆರೋಪಿಯನ್ನು ಪ್ರಚೋಧಿಸಿ ಅಂಗಡಿಯ ಬಳಿಗೆ ಕರೆಯಿಸಿದ್ದಾರೆ ಎಂದರೆ ಸರಿಯಲ್ಲ. ಆರೋಪಿಯ ಹೆಂಡತಿ ಪರಿಶಿಷ್ಟ ಜಾತಿಗೆ ಸೇರಿದ್ದಾರೆ ಎಂದರೆ ಆಗಿರಬಹುದು ಎಂದು ಸಾಕ್ಷಿ ನುಡಿಯುತ್ತಾರೆ. ಈಗ ನಾನು ನೋಡುತ್ತಿರುವ ದಾಖಲೆಯ ಪ್ರಕಾರ ಆರೋಪಿಯ ಹೆಂಡತಿ ಪರಿಶಿಷ್ಟ ಜಾತಿಗೆ ಸೇರಿದ್ದವರು. ಸದರಿ ದಾಖಲೆಯನ್ನು ನಿಡಿ-7 ಎಂದು ರುಜುವಾತಿಗೊಳಪಡಿಸುವ ಷರತ್ತಿಗೆ ಒಳಪಟ್ಟು ಗುರುತಿಸಲಾಯಿತು.

18. ಕೊಡಗಿನಲ್ಲಿ ಹುಲಿ, ಆನೆ ಹಾಗೂ ಮಾನವ ಸಂಘರ್ಷ ಇದೆ ಎಂದರೆ ಸರಿ. ದಿನಾಂಕ 22-01-2016 ರ ಶಕ್ತಿ ದಿನ ಪತ್ರಿಕೆಯ ಪ್ರಕಾರ ಆರೋಪಿಯ ಎರಡು ಹಸುಗಳಿಗೆ ಹುಲಿ ದಾಳಿ ಮಾಡಿ ತಿಂದು ಹಾಕಿದೆ ಎಂದರೆ ಸರಿ. ಸದರಿ ದಿನಪತ್ರಿಕೆಯನ್ನು ನಿಡಿ-8 ಎಂದು ರುಜುವಾತಿಗೊಳಪಡಿಸುವ ಷರತ್ತಿಗೆ ಒಳಪಟ್ಟು ಗುರುತಿಸಲಾಯಿತು. ಅದೇ ರೀತಿ ದಿನಾಂಕ 29-05-2019 ರಂದು ಇದೇ ಆರೋಪಿಯ ಎರಡು ಹಸುಗಳನ್ನು ಹುಲಿ ದಾಳಿ ತಿಂದು ಹಾಕಿದೆ ಎಂದರೆ ಸರಿ. ಸದರಿ ದಿನ ಪತ್ರಿಕೆಯ ಭಾಗವನ್ನು ನಿಡಿ-9 ಎಂದು ರುಜುವಾತಿಗೊಳಪಡಿಸುವ ಷರತ್ತಿಗೆ ಒಳಪಟ್ಟು ಗುರುತಿಸಲಾಯಿತು. ವನ್ಯ ಪ್ರಾಣಿಗಳ ಹಾವಳಿಯಿಂದ ರಕ್ಷಿಸಲು ಆರೋಪಿ ತನ್ನ ಕಾರಿನಲ್ಲಿ ತೋಟಕ್ಕೆ ಹೋಗುವ ಸಂದರ್ಭದಲ್ಲಿ ಯಾವಾಗಲೂ ಕೋವಿಯನ್ನು ಇರಿಸಿಕೊಳ್ಳುತಿದ್ದರು ಎಂದರೆ ಇರಬಹುದು ಎಂದು ಸಾಕ್ಷಿ ನುಡಿಯುತ್ತಾರೆ. ಪ್ರಾಸಾ-1 ರವರಿಗೆ ಆರೋಪಿಯ ಕಾರಿನಲ್ಲಿ ಕೋವಿ ಇರುವ ವಿಚಾರ ಗೊತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ನನ್ನ ತನಿಖೆಯಲ್ಲೂ ಸಹ ಈ ಮೇಲೆ ಹೇಳಿದ ವಿಚಾರ ಕಂಡು ಬಂದಿತ್ತು ಎಂದರೆ ಸರಿಯಲ್ಲ. ಆ ಕಾರಣದಿಂದ ಪ್ರಾಸಾ-1 ಆರೋಪಿಯ ಕೋವಿಯನ್ನು ಕಾರಿನಿಂದ ಕಿತ್ತುಕೊಳ್ಳುವ ಸಂದರ್ಭದಲ್ಲಿ ಮಿಸ್ fire ಆಗಿ ಗುಂಡು ಬಡಿದಿತ್ತು ಎಂದರೆ ಸರಿಯಲ್ಲ. ಆರೋಪಿ ಯಾವತ್ತು ಪ್ರಾಸಾ-1 ರವರಿಗೆ ಗುಂಡು ಹೊಡೆದಿಲ್ಲ ಮತ್ತು ಈ ವಿಚಾರ ನನಗೆ ತನಿಖೆಯ ಸಂದರ್ಭದಲ್ಲಿ ಗೊತ್ತಾಗಿದೆ ಎಂದರೆ ಸರಿಯಲ್ಲ.

19. ಕೋವಿಯನ್ನು ಅಮಾನತ್ತುಪಡಿಸಿಕೊಂಡ ನಂತರ ಕೋವಿಯಲ್ಲಿ ಇದ್ದ ಬೆರಳಚ್ಚುಗಳನ್ನು ಪರಿಶೀಲಿಸಲು ಅದನ್ನು ಬೆರಳಚ್ಚು ತಜ್ಞರಲ್ಲಿಗೆ

ಕಳುಹಿಸಿರಲಿಲ್ಲ. ಆರೋಪಿ ಪ್ರಾಸಾ-1 ರವರಿಗೆ ಗುಂಡು ಹೊಡೆಯುವ ಯಾವುದೇ ದುರುದ್ದೇಶ ಇದ್ದಿರಲಿಲ್ಲ ಮತ್ತು ಈ ವಿಚಾರ ನನಗೆ ತನಿಖೆ ಸಂದರ್ಭದಲ್ಲಿ ನನಗೆ ಗೊತ್ತಾಗಿದೆ ಎಂದರೆ ಸರಿಯಲ್ಲ. ಆರೋಪಿಯನ್ನು ಪ್ರಾಸಾ-14 ರವರು ಪತ್ತೆ ಹಚ್ಚಿ ವಶಕ್ಕೆ ಪಡೆದಿದ್ದಾರೆ ಎನ್ನುವುದು ಸಹ ಈ ಪ್ರಕರಣಕ್ಕಾಗಿ ನಾನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಕೃತ್ಯ ಸ್ಥಳಕ್ಕೆ ಹೋಗಿದ್ದೇನೆ ಮತ್ತು ಮಹಜರ್ ಮಾಡಿದ್ದೇನೆ ಎನ್ನುವುದು ಸಹ ಸುಳ್ಳು ಎಂದರೆ ಸರಿಯಲ್ಲ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆಯನ್ನಾಗಲೀ, ಮುಂದುವರೆದ ಹೇಳಿಕೆಯನ್ನಾಗಲೀ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಪ್ರಾಸಾ-1 ಪರಿಶಿಷ್ಟ ಜಾತಿಗೆ ಸೇರಿದ್ದವರು ಅಲ್ಲ ಎಂದು ನನಗೆ ಗೊತ್ತಿದ್ದರೂ ಸಹ ಅವರು ಪರಿಶಿಷ್ಟ ಜಾತಿಗೆ ಸೇರಿದ್ದವರು ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ನಿಪಿ-10 ರ ಫೋಟೊಗಳನ್ನು ಈ ಪ್ರಕರಣಕ್ಕಾಗಿ ನಾನೇ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ, ಆರೋಪಿಗೂ ಯಾವುದೇ ರೀತಿಯ ಸಂಬಂಧ ಇಲ್ಲ ಮತ್ತು ಸರಿಯಾಗಿ ತನಿಖೆ ಮಾಡದೆ ಸುಳ್ಳು ದೋಷಾರೋಪಣಾ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ:</u>** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.
ಸಹಿ/-xxx

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು, ಮಡಿಕೇರಿ.